**<u>ಸಾಕ್ಷಿಗೆ ದಿನಾಂಕಃ 30.09.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ</u>**

**<u>ಮುಖ್ಯ ವಿಚಾರಣೆ: 3 ನೇ ಎದುರುದಾರರ ಪರ ಶ್ರೀ.KP ವಕೀಲರಿಂದಃ</u>**

1) **3** ನೇ ಎದುರುದಾರ ಸಂಸ್ಥೆಯಲ್ಲಿ ನಾನು ಕಾನೂನು ವ್ಯವಸ್ಥಾಪಕನಾಗಿ ಕರ್ತವ್ಯ ಮಾಡುತ್ತಿದ್ದೇನೆ. ನನ್ನ ಮುಖ್ಯ ವಿಚಾರಣೆ ಸಾಕ್ಷ್ಯಕ್ಕೆ ಸಂಬಂಧಿಸಿದಂತೆ ನಾನು ಈ ದಿನ ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಅದರಲ್ಲಿರುವ ಅಂಶಗಳು ಸತ್ಯವಾಗಿರುತ್ತವೆ. ಅದನ್ನು ನಾನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ. ನನ್ನ ಹೇಳಿಕೆಗೆ ಸರಿಯಾಗಿ ನಮ್ಮ ವಕೀಲರು ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಸಿದ್ಧಪಡಿಸಿದ್ದಾರೆ.

2) ಅಧಿಕಾರ ಪತ್ರವನ್ನು ನಿ.ಆರ್.**5** ಎಂದು ಗುರುತಿಸಿದೆ.

3) Chassis No. MBL-HAW01XKHL12990 ವಾಹನಕ್ಕೆ ನೀಡಿರುವಂತಹ ವಿಮಾ ಪಾಲಿಸಿಯನ್ನು ನಿ.ಆರ್.**6** ಎಂದು ಗುರುತಿಸಿದೆ.

**<u>ಸೂಚನೆಃ</u>** ನಿ.ಆರ್.**6** ಎಂದು ಗುರುತು ಆಗಿರುವ ದಾಖಲೆಯಲ್ಲಿ ಮೊದಲನೇ ಸಾಲಿನಲ್ಲಿಯೇ **Bundled – Two wheeler policy (1 year OD + 5 years TP)** ಎಂದು ಇದೆ. ಇದರ ಅರ್ಥ ಏನು ಎಂದು ನ್ಯಾಯಾಲಯವು ಈ ಸಾಕ್ಷಿದಾರರನ್ನು ಪ್ರಶ್ನೆ ಮಾಡಿದೆ. ಇದಕ್ಕೆ ಪ್ರತಿಯಾಗಿ ಈ ಸಾಕ್ಷಿದಾರರು "ಈ ಪಾಲಿಸಿಯನ್ನು ನೀಡಿದ ದಿನದಿಂದ

ಒಂದು ವರ್ಷದ ಕಾಲ ಈ ಪಾಲಿಸಿಯು **OD** ಅಂದರೆ **Own Damage** ಮತ್ತು **Third party risk** ಅನ್ನು ಒಳಗೊಂಡಿರುತ್ತದೆ ಮತ್ತು **2** ನೇ ವರ್ಷದ ಪ್ರಥಮ ದಿನದಿಂದ **5** ನೇ ವರ್ಷದ ಕೊನೆಯ ದಿನದವರೆಗೂ ಕೇವಲ **third party risk** ಅನ್ನು ಮಾತ್ರ ಒಳಗೊಂಡಿರುತ್ತದೆ" ಎಂದು ನುಡಿದಿದ್ದಾರೆ.

4) ಆದ ಕಾರಣದಿಂದ ನಮ್ಮ ವಿರುದ್ಧ ಈ ಪ್ರಕರಣವನ್ನು ವಜಾ ಮಾಡಬೇಕು ಎಂದು ಪ್ರಾರ್ಥಿಸುತ್ತೇನೆ.

**<u>ಪಾಟೀ ಸವಾಲು: ಕೋರಿಕೆಯ ಮೇರೆಗೆ ಮುಂದೂಡಲಾಯಿತು.</u>**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.